

ಜೋಧಪುರ ಕೋಟೆಯ ಕಲಾತ್ಮಕ ಉಪ್ಪರಿಗೆ



ಉದಯಪುರದ ಅರಮನೆ

ರಾಜಸ್ಥಾನಕ್ಕೆ ಹೋದಾಗಲೆಲ್ಲ ಮರುಭೂಮಿಯಷ್ಟೇ ಎದ್ದು ಕಾಣುವುದು ಅಲ್ಲಿನ ಕೋಟೆ ಮತ್ತು ಅರಮನೆಗಳು. ಇವು ಜೈಸಲ್ಮೇರ್, ಜೈಪುರ, ಕುಂಬಳಗಢ, ಜೋಧಪುರ, ಉದಯಪುರ, ಮೇವಾಡಗಳಲ್ಲಿವೆ. ದೇಶವಿದೇಶಗಳಿಂದ ಬರುವ ಪ್ರವಾಸಿಗರು ಇವನ್ನು ತಮ್ಮದೇ ಕಣ್ಣೋಟಗಳಿಂದ ನೋಡುತ್ತಾರೆ ಮತ್ತು ಅರ್ಥೈಸುತ್ತಾರೆ. ಪ್ರತಿಯೊಂದು ಕಣ್ಣೋಟದ ಹಿಂದಿರುವ ಲೋಕದೃಷ್ಟಿಯೂ ಬೇರೆಬೇರೆ.

ಕೋಟೆ–ಅರಮನೆಗಳನ್ನು ದೊರೆಗಳ ಶೌರ್ಯ ಸಾಹಸಗಳ ಭಾಗವಾಗಿ ನೋಡುವ ನೋಟವು ಐತಿಹಾಸಿಕ ಸ್ಮಾರಕಗಳ ಪ್ರವಾಸದಲ್ಲಿ ಸಾಮಾನ್ಯವಾಗಿ ಇರುತ್ತದೆ. ಇಲ್ಲಿನ ಹೆಮ್ಮೆಯ ಭಾವವು, ಚರಿತ್ರೆಯನ್ನು ದೊರೆಗಳ ಯುದ್ಧ–ಶಾಂತಿ, ಸೋಲು–ಗೆಲುವು, ಶತ್ರು–ಮಿತ್ರ, ಸಂಭ್ರಮ–ವಿಷಾದಗಳ ಮೂಲಕ ನೋಡಲು ಒತ್ತಾಯಿಸುತ್ತದೆ. ಆಗ ಕೋಟೆ–ಅರಮನೆಗಳು ಪ್ರಭುತ್ವದ ಸಾಧನೆಯ ಪ್ರತೀಕವಾಗುತ್ತವೆ. ಚರಿತ್ರೆಯಲ್ಲಿ ಪ್ರಭುಗಳ ಪಾತ್ರಕ್ಕೆ ಮಹತ್ವವಿದೆ, ದಿಟ. ಅನೇಕ ಪ್ರಭುಗಳು ಜನರಿಗಾಗಿ ಕೆರೆಕಟ್ಟಿಸುವ, ಜಮೀನು ಕೊಡುವ ಕೆಲಸ ಮಾಡಿರುವುದುಂಟು. ಹೆಮ್ಮೆಯ ನೋಟದ ಸಮಸ್ಯೆಯೆಂದರೆ, ಲೋಕೋಪಕಾರಿಗಳಾಗಿದ್ದ ಇಂತಹ ದೊರೆಗಳ ಹಾಗೂ ತಮಗಾಗಿ ವಿಲಾಸದಲ್ಲಿ ಬದುಕಿದ ದೊರೆಗಳ ನಡುವೆ ವ್ಯತ್ಯಾಸ ಮಾಡದಿರುವುದು.

ರಾಜಸ್ಥಾನದ ಬಹುತೇಕ ದೊರೆಗಳು ಜನ ಬಿರುಬಿಸಿಲಲ್ಲಿ ಸುಡುವಾಗ ಸರೋವರಗಳ ಮಧ್ಯದಲ್ಲಿ ಅರಮನೆ ಕಟ್ಟಿಕೊಂಡವರು. ಅರಮನೆಯೊಳಗೂ ತಂಪಿರುವಂತೆ ಚಿಲುಮೆ ಉಕ್ಕಿಸಿಕೊಂಡವರು. ಜೋಧಪುರದ 'ಉಮ್ಮೈದ್ ಭವನ'ವಂತೂ ಮಾರವಾಡದ ದೊರೆಗಳ ಐಷಾರಾಮಿ ಬದುಕಿನ ಪ್ರತೀಕ. ದೇಶದಲ್ಲಿ ಬ್ರಿಟಿಷರ ವಿರುದ್ಧ ಚಳವಳಿ ನಡೆಯುತ್ತಿದ್ದಾಗ, ಇವರು ಬ್ರಿಟಿಷ್ ವಾಸ್ತುಶಿಲ್ಪಿಗಳನ್ನು ನೇಮಿಸಿಕೊಂಡು ಪಾಶ್ಚಾತ್ಯ ಮಾದರಿಯ ಬೃಹತ್ ಅರಮನೆಯನ್ನು ಬೆಟ್ಟದ ಮೇಲೆ ಕಟ್ಟಿಸಿದರು. ಆ ಅರಮನೆಯ ತುಂಬ ಪಾಶ್ಚಿಮಾತ್ಯ ಜೀವನಶೈಲಿಯ ಬದುಕಿನ ಚಿತ್ರಗಳೇ ತುಂಬಿವೆ. ಇವರು ದೇಶ ಸ್ವತಂತ್ರಗೊಂಡ ಬಳಿಕ – ರಾಜ್ಯಪಾಲರಾಗಿ, ರಾಯಭಾರಿಗಳಾಗಿ, ವಿಮಾನದ ಕ್ಯಾಪ್ಟನುಗಳಾಗಿ ಕಳೆದುಹೋದ ರಾಜತ್ವವನ್ನು ಮರಳಿ ಅನುಭವಿಸಿದರು ಕೂಡ. ಇವರ ಮುಂದೆ ಕೊಲ್ಹಾಪುರದ ಶಾಹು ಮಹಾರಾಜ, ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್, ಬರೋಡದ ಗಾಯಕವಾಡ್ ತುಂಬ ದೊಡ್ಡವರಾಗಿ ಕಾಣುತ್ತಾರೆ. ಈ ಮೂರೂ ದೊರೆಗಳೂ ಬ್ರಿಟಿಷರ ಅಧೀನದಲ್ಲಿದ್ದವರೇ. ಅರಮನೆಗಳಲ್ಲಿ ವಾಸಿಸಿದವರೇ. ಆದರೆ ತಮ್ಮ ಆಧುನಿಕ ಪ್ರಜ್ಞೆ ಮತ್ತು ಮುಂಗಾಣ್ಕೆಯಿಂದ ಸಂಸ್ಥಾನಗಳ ಜನರ ಬದುಕನ್ನು ಉತ್ತಮಗೊಳಿಸಲು ಹೆಣಗಿದವರು.

ಅರಮನೆ–ಕೋಟೆಗಳನ್ನು, ಕಟ್ಟಿದ ವಾಸ್ತುಶಿಲ್ಪಿ ಹಾಗೂ ಕುಶಲ ಕರ್ಮಿಗಳ ನೆಲೆಯಿಂದ ನೋಡುವ ಮತ್ತೊಂದು ಕಣ್ಣೋಟವಿದೆ. ಇದು ಜನರ ದುಡಿಮೆ, ಕುಶಲತೆ, ಪ್ರತಿಭೆಗಳ ಮೂಲಕ ಸ್ಮಾರಕಗಳನ್ನು ನೋಡುತ್ತದೆ. ಈ ದೃಷ್ಟಿಯಿಂದ ಗಮನಿಸುವಾಗ, ರಾಜಸ್ಥಾನದ ಅರಮನೆ ಮತ್ತು ಕೋಟೆಗಳಲ್ಲಿ – ಕಲ್ಲುಕೆಲಸಗಾರರು, ಚಿತ್ರಕಾರರು, ಗಾರೆಯವರು, ಬಡಗಿಗಳು ತಮ್ಮ ಕುಶಲತೆಯನ್ನು ಶಿಖರಕ್ಕೊಯ್ದು ಮುಟ್ಟಿಸಿರುವುದು ಗೊತ್ತಾಗುತ್ತದೆ. ಬೇಲೂರು ಹಳೇಬೀಡುಗಳ ಶಿಲ್ಪಗಳನ್ನು, ಗೋಲಗುಂಬಜಿನ ವಾಸ್ತುಶಿಲ್ಪವನ್ನು, ನೇಪಾಳದ ಅರಮನೆ–ಗುಡಿಗಳ ಕಟ್ಟಿಗೆ ಕೆತ್ತನೆಯನ್ನು ನೋಡುವಾಗಲೂ ಜನಪ್ರತಿಭೆಯ ಬಗ್ಗೆ ಇಂತಹುದೇ ವಿಸ್ಮಯಭಾವ ಆವರಿಸುತ್ತದೆ.

ಅರಮನೆ–ಕೋಟೆಗಳನ್ನು ಕಲಾವಿದರ ಮೂಲಕ ನೋಡಿದರೆ, ಬೇರೊಂದು ಅನುಭವವಾಗುತ್ತದೆ. ಮೊದಲಿಂದಲೂ ಅರಮನೆಗಳು ಕಲಾವಿದರನ್ನು ಆಸ್ಥಾನದಲ್ಲಿಟ್ಟು ಪೋಷಿಸಿದವಷ್ಟೆ. ಭಾರತದ ಸಂಗೀತ ಸಾಧನೆಯ ಹಿಂದೆ ಆಸ್ಥಾನಗಳ ದೊಡ್ಡ ಕೊಡುಗೆಯಿದೆ. ರಾಜಸ್ಥಾನದ ಜನಪದ ಗಾಯಕರು, ದೊರೆಗಳ ಕುಲಚರಿತ್ರೆಯನ್ನು ಹಾಡಿಕೊಂಡು, ಅರಮನೆಗಳಲ್ಲಿ ಪಾರಿವಾಳಗಳಂತೆ ಬದುಕಿದವರು. ಕರ್ನಾಟಕಕ್ಕೆ ಹೆಚ್ಚು ಪರಿಚಿತರಾಗಿರುವ ಸೂಫಿಗಾಯಕ ಮುಖ್ತಿಯಾರ ಅಲಿಯವರ ಪೂರ್ವಜರು ಕೂಡ, ರಾಜಸ್ಥಾನದ ಪೂಗಲ್ ಸಂಸ್ಥಾನದ ಆಶ್ರಯದಲ್ಲಿದ್ದವರು. ರಾಜರು ಗತಿಸಿದರೂ ಕಲಾವಿದರಿಗೆ ಅರಮನೆ–ಕೋಟೆಗಳ ಹಂಗು ತಪ್ಪಲಿಲ್ಲ. ರಾವಣಹಸ್ತ ಮತ್ತು ಸಾರಂಗಿಗಳನ್ನು ನುಡಿಸುತ್ತ, ಇಲ್ಲಿನ ಕೋಟೆ–ಅರಮನೆ ನೋಡುವ ಪ್ರವಾಸಿಗರಿಗಾಗಿ, ಇವರು ನಿರಂತರವಾಗಿ ಹಾಡುತ್ತಿದ್ದಾರೆ, ನರ್ತಿಸುತ್ತಿದ್ದಾರೆ. ಅವರು ಕಲೆಯನ್ನು ಆಸ್ವಾದಿಸುವಾಗ ರಾಜಸ್ಥಾನದ ಬಿರುಬಿಸಿಲೂ ಬೆಳುದಿಂಗಳಾಗುತ್ತದೆ.



ಅರಸರಿಗೆ ನೀರಿನ ತಾಣವೂ ದಣಿವಾರಿಸಿಕೊಳ್ಳಲಿಕ್ಕೆ ನೆಲೆಯಾಗಬಲ್ಲದು

ಮರುಭೂಮಿ ಪ್ರದೇಶದಲ್ಲಿ ಇಷ್ಟೊಂದು ಕೋಟೆ ಅರಮನೆಗಳು ಹುಟ್ಟಿದ್ದಾದರೂ ಹೇಗೆ ಮತ್ತು ಯಾಕೆ? ಕಾರಣವಿಷ್ಟೆ: ರಾಜಸ್ಥಾನ–